ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY, RESEARCH AND REFERENCE BRANCH**

**ಪತ್ರಿಕಾ ತುಣುಕುಗಳು**
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ______

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ    ದಿನಾಂಕ : DATE: 14/12/20

# ಬನ್ನಂಜೆ ಕೀರ್ತಿಶೇಷ

14/12/20



ಉಡುಪಿ: ನಾಡಿನ ಹಿರಿಯ ವಿದ್ವಾಂಸ 'ವಿದ್ಯಾವಾಚಸ್ಪತಿ' ಡಾ। ಬನ್ನಂಜೆ ಗೋವಿಂದಾಚಾರ್ಯ (84) ಅವರು ವಯೋಸಹಜ ಅಸೌಖ್ಯದಿಂದ ಡಿ. 13ರಂದು ಅಂಬಲಪಾಡಿಯ ಸ್ವಗೃಹದಲ್ಲಿ ನಿಧನ ಹೊಂದಿದರು. ಅವರು ಪುತ್ರ, ನಾಲ್ವರು ಪುತ್ರಿಯರನ್ನು ಅಗಲಿದ್ದಾರೆ.

1936ರ ಆಗಸ್ಟ್ 3ರಂದು ಹಿರಿಯ ವಿದ್ವಾಂಸ ಪಡುಮನ್ನೂರು ನಾರಾಯಣಾಚಾರ್ಯರ ಪುತ್ರನಾಗಿ ಜನಿಸಿದ ಗೋವಿಂದಾಚಾರ್ಯರು ತಂದೆಯವರಿಂದಲೇ ಶಾಸ್ತ್ರ ಪಾಠಗಳನ್ನು ಕಲಿತು ದೊಡ್ಡವರಾದ ಬಳಿಕ ಸ್ವಯಂ ಓದಿನಿಂದ ಜ್ಞಾನವನ್ನು ಬೆಳೆಸಿಕೊಂಡಿದ್ದರು.

'ಉದಯವಾಣಿ' ಪತ್ರಿಕೆಯಲ್ಲಿ ಆರಂಭದ ಎರಡು ದಶಕಗಳ ಕಾಲ 'ಸಾಪ್ತಾಹಿಕ'ದ ಸಂಪಾದಕರಾಗಿ ಸೇವೆ ಸಲ್ಲಿಸಿದ್ದ ಬನ್ನಂಜೆಯವರು ಬಹುತೇಕ ನಿಂತೇ ಹೋಗಿದ್ದ ಸಂಸ್ಕೃತದ ವ್ಯಾಖ್ಯಾನ ಪರಂಪರೆಗೆ ಶತಕಗಳ ಬಳಿಕ ಮತ್ತೆ ಜೀವ ಕೊಟ್ಟವರು ಎಂಬ ಹೆಗ್ಗಳಿಕೆಗೆ ಪಾತ್ರರು. ವೇದವ್ಯಾಸರು, ಪಾಣಿನಿ, ಪತಂಜಲಿ, ನಾರದ, ಶಾಂಡಿಲ್ಯ ಮೊದಲಾದ ಸೂತ್ರಕಾರರಂತೆ ಬನ್ನಂಜೆಯವರು ಪ್ರಾಣಸೂತ್ರ, ವ್ಯಾಕರಣ ಸೂತ್ರಗಳನ್ನು ರಚಿಸಿ ಅನೇಕ ಶತಕ, ಸಹಸ್ರಗಳ ಬಳಿಕ ಸೂತ್ರ ಪರಂಪರೆಯನ್ನು ಮತ್ತೆ ಮುಂದುವರಿಸಿದರು.

**ಸರ್ಕಾರಿ ಗೌರವದೊಂದಿಗೆ ಅಂತ್ಯಕ್ರಿಯೆ:** ಡಾ. ಬನ್ನಂಜೆ ಗೋವಿಂದಾಚಾರ್ಯರ ಅಂತ್ಯಕ್ರಿಯೆ ಸರ್ಕಾರದ ಸಕಲ ಗೌರವದೊಂದಿಗೆ ಅಂಬಲಪಾಡಿಯ ಸ್ವಗೃಹದಲ್ಲಿ ಭಾನುವಾರ ಸಂಜೆ ನೆರವೇರಿತು.

▶ 5ನೇ ಪುಟಕ್ಕೆ

**ಬನ್ನಂಜೆ ಗೋವಿಂದಾಚಾರ್ಯ ಸಾಹಿತ್ಯ ಜಗತ್ತಿಗೆ ಅಪಾರ ಕೊಡುಗೆ ನೀಡಿದ್ದರು. ಕನ್ನಡ,ಸಂಸ್ಕೃತದಲ್ಲಿ ಪಾಂಡಿತ್ಯ ಹೊಂದಿದ್ದರು.**

• **ನರೇಂದ್ರ ಮೋದಿ,** ಪ್ರಧಾನಿ

**ಬನ್ನಂಜೆಯವರು ವಿಧಿವಶರಾದ ಸುದ್ದಿ ತಿಳಿದು ದುಃಖವಾಗಿದೆ. ಪುರಾಣ ಕುರಿತ ಅವರ ಕೃತಿಗಳು ಧಾರ್ಮಿಕ ಪ್ರಜ್ಞೆ ಜಾಗೃತಗೊಳಿಸುವಂತಿದ್ದವು.**

• **ಯಡಿಯೂರಪ್ಪ,** ಮುಖ್ಯಮಂತ್ರಿ